4 ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರ ಸೇರಿದಂತೆ ಕರ್ನಾಟಕ ಭೂ ಸುಧಾರಣಾ ಕಾಯಿದೆ 1961 ರಡಿಯಲ್ಲಿ ನಿಗದಿಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ, ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು.

ಡಿ.ಎಂ. ಆಗಾ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

ಎನ್.ಜಿ.ಇ.ಎಫ್. ಕಾರ್ಖಾನೆ ಅಭಿವೃದ್ಧಿ ಪಡಿಸುವುದು

1353 (1647) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಕಾರ್ಖಾನೆಯು ಎಷ್ಟು ವರ್ಷಗಳಿಂದ ನಷ್ಟದಲ್ಲಿದೆ, ಇದುವರೆಗೂ ಎಷ್ಟು ನಷ್ಟವಾಗಿದೆ;

ಆ) ಈ ಉದ್ಯಮವನ್ನು ಖಾಸಗೀಕರಣ ಮಾಡಲು ಸರ್ಕಾರ ನಿರ್ಧರಿಸಿದೆಯೇ; ಹಾಗಿದ್ದಲ್ಲಿ ಖಾಸಗೀಕರಣ ಯಾವ ಹಂತದಲ್ಲಿದೆ;

ಇ) ಎನ್‌ಜಿಇಎಫ್‌ನ್ನು ಖಾಸಗೀಯವರಿಗೆ ಒಪ್ಪಿಸದೇ ವಿದ್ಯುತ್ ರಂಗದಲ್ಲಿ ಪರಿಣತರಾದವರನ್ನು ಕಾರ್ಖಾನೆ ಮುಖ್ಯಸ್ಥರನ್ನಾಗಿ ಮಾಡಿ ಸರ್ಕಾರ ನೆರವು ನೀಡಿದರೆ ಆರು ತಿಂಗಳಲ್ಲಿ ಲಾಭ ತರುವುದಾಗಿ ಕಾರ್ಮಿಕರು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಅ) ಎನ್‌ಜಿಇಎಫ್ ನಿಯಮಿತವು ಕಳೆದ 13 ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿದೆ (1989-90, 1990-91 ಮತ್ತು 2000-01ಗಳನ್ನು ಹೊರತುಪಡಿಸಿ). ದಿ:3.03.2001ರ ವರೆಗೆ ಎನ್‌ಜಿಇಎಫ್ ನಿಯಮಿತವು ಅನುಭವಿಸಿರುವ ಒಟ್ಟು ನಷ್ಟ ರೂ.201.59 ಕೋಟಿಗಳು.

ಆ) ಹೌದು. ಸರ್ಕಾರವು ತನ್ನ ಆದೇಶ ಸಂಖ್ಯೆ:ಸಿಐ 28 ಸಿಇಎಲ್ 2000 (ಪಿಯುಸಿ) (ಭಾಗ-2) ದಿನಾಂಕ:31.3.2001ರ ಮೇರೆಗೆ ಕಂಪನಿಯನ್ನು ಖಾಸಗೀಕರಣಗೊಳಿಸಲು ಜಾಗತಿಕ ಟೆಂಡರ್‌ಗಳನ್ನು ಆಹ್ವಾನಿಸಲು ಆದೇಶ ನೀಡಿತು. ಆದರೂ ಈವರೆವಿಗೂ ಯಾವುದೇ ಪ್ರಸ್ತಾಪವು ಸ್ವೀಕೃತವಾಗಿರುವುದಿಲ್ಲ.

ಇ) ಹೌದು. ಆದಾಗ್ಯೂ, ಖಾಸಗೀಕರಣಗೊಳಿಸಲು ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದ ಕಾರಣ ಸರ್ಕಾರವು ಸದರೀ ನಿಗಮವನ್ನು ಮುಚ್ಚಲು ತೀರ್ಮಾನಿಸಿದೆ.

ಈ) ಸರ್ಕಾರವು ಈಗಾಗಲೇ ಈ ಕಂಪನಿಯನ್ನು ಮುಚ್ಚಲು ತೀರ್ಮಾನಿಸಿದೆ.

ರಾಜ್ಯದಲ್ಲಿ ಹೊಸ ರಫ್ತು ನೀತಿ ಪ್ರಕಟಣೆ

1354 (1648) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಹೊಸದಾಗಿ ರಫ್ತು ನೀತಿಯನ್ನು ಪ್ರಕಟಿಸಿದೆಯೇ;

ಆ) ಹಿಂದಿನ ರಫ್ತು ನೀತಿಗೂ, ಈಗಿನ ರಫ್ತು ನೀತಿಗೂ ಇರುವ ವ್ಯತ್ಯಾಸಗಳೇನು;

ಇ) ಕಳೆದ ಹಣಕಾಸು ವರ್ಷದಲ್ಲಿ ಎಷ್ಟು ಕೋಟಿ ಮೌಲ್ಯದ ವಸ್ತುಗಳನ್ನು ರಫ್ತು ಮಾಡಲಾಗಿದೆ;

ಈ) ಇದರಿಂದ ರಾಜ್ಯದ ಬೊಕ್ಕಸಕ್ಕೆ ಬಂದಿರುವ ಆದಾಯ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ರಾಜ್ಯದ ರಫ್ತು ನೀತಿಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ಇದು ರಾಜ್ಯದ ಮೊದಲ ರಫ್ತು ನೀತಿ.

ಇ) ಕಳೆದ ಹಣಕಾಸು ವರ್ಷ 2001-2002 ರಲ್ಲಿ ರಾಜ್ಯದಲ್ಲಿ ಅಂದಾಜು ರೂ.201.145.58 ಕೋಟಿ ಮೌಲ್ಯದ ವಸ್ತುಗಳನ್ನು ರಫ್ತು ಮಾಡಲಾಗಿದೆ.

ಈ) ರಾಜ್ಯಗಳ ರಫ್ತು ನಿರ್ವಹಣೆಯ ಹಾಗೂ ರಫ್ತು ಏರಿಕೆಯ ಪ್ರಮಾಣದ ಆಧಾರದ ಮೇಲೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಅಸೇಡ್ ಯೋಜನೆಯನ್ವಯ ರೂ.9.00 ಕೋಟಿಗಳನ್ನು ರಫ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ನೀಡಿದೆ.

ನಷ್ಟದಲ್ಲಿರುವ ರೇಷ್ಮೆ ಕಾರ್ಖಾನೆಗಳು

1355 (1630) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ರೇಷ್ಮೆ ಕಾರ್ಖಾನೆ ಸಂತೇಮಾರಹಳ್ಳಿ, ಮಾಂಬಳ್ಳಿ, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ ಮುಡಿಗುಂಡಂ ಹಾಗೂ ಸರ್ಕಾರಿ ಮಿನಿ ಸಿಲ್ಕ್ ಫಿಲೇಚರ್ ತೋಳಹುಣಸೆ ಇವು ರೇಷ್ಮೆ ಇಲಾಖೆಯ ಆಡಳಿತಕ್ಕೆ ಒಳಪಟ್ಟಿಲ್ಲವೆ?

ಆ) ಹಾಗಿದ್ದಲ್ಲಿ ತೋಳಹುಣಸೆ ಕಾರ್ಖಾನೆ ನಷ್ಟವನ್ನು ಹೊರತುಪಡಿಸಿ ಇನ್ನುಳಿದ ಕಾರ್ಖಾನೆಗಳ ನಷ್ಟವನ್ನು ವಾಣಿಜ್ಯ ದೃಷ್ಟಿ ಕೋನದಲ್ಲಿ ಪರಿಗಣಿಸಲು ಕಾರಣವೇನು?

ಇ) ಈ ಎಲ್ಲಾ ಕಾರ್ಖಾನೆಗಳು ಇಲಾಖೆಯ ಹಾಗೂ ರಾಜ್ಯ ರೇಷ್ಮೆ ಬೆಳೆಗಾರರ ಸಾಮಾಜಿಕ ಹಿತದೃಷ್ಟಿ ಕಾಪಾಡುವಲ್ಲಿ ಫಲಕಾರಿಯಾಗಿಲ್ಲವೆ? ಹಾಗಿದ್ದಲ್ಲಿ. ಈ ಎಲ್ಲಾ ಕಾರ್ಖಾನೆಗಳನ್ನು ಸಹ ತೋಳಹುಣಸೆ ಕಾರ್ಖಾನೆಯಂತೆ ವಾಣಿಜ್ಯೇತರ ಇಲಾಖಾ ಕಾರ್ಖಾನೆಗಳೆಂದು ಪರಿಗಣಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಈ ಎಲ್ಲಾ ಸಂಸ್ಥೆಗಳು ರೇಷ್ಮೆ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ.

ಆ) ತೋಳಹುಣಸೆ ಅರೆ ಸ್ವಯಂಚಾಲಿತ ಘಟಕವು ಉಲಿದ 4 ಘಟಕಗಳಿಂದ ಬೇರೆ ಲೆಕ್ಕ ಶೀರ್ಷಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ 4 ಘಟಕಗಳು ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿತವಾಗಿದ್ದು, ವಾಣಿಜ್ಯ ಸಂಸ್ಥೆಗಳಾಗಿ ಅಂದಿನಿಂದರೇ ಕಾರ್ಯ ನಿರ್ವಹಿಸುತ್ತವೆ.

ಇ) ಈ ಎಲ್ಲಾ ಕಾರ್ಖಾನೆಗಳು ಇಲಾಖೆಯ ಹಾಗೂ ರಾಜ್ಯ ರೇಷ್ಮೆ ಬೆಳೆಗಾರರ ಸಾಮಾಜಿಕ ಹಿತದೃಷ್ಟಿ ಕಾಪಾಡುವಲ್ಲಿ ಮೇಲ್ನೋಟಕ್ಕೆ ಪಲಕಾರಿಯಾಗಿ ಕಂಡುಬಂದರೂ ವಾಸ್ತವಿಕವಾಗಿ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿವೆ. ಸರ್ಕಾರಿ ಫಿಲೇಚರ್ ಕಾರ್ಖಾನೆಗಳನ್ನು ವಿಲೇನಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.